**PW-03**

**ಇಂದು ದಿನಾಂಕ:** 17.03.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎನ್.ಕೆ.ವಕೀಲರಿಂದಃ**

ನಾನು ಮೈಸೂರಿನಲ್ಲಿ deed writer ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ registration ಕೆಲಸ ಮಾಡುತ್ತಿದ್ದೇನೆ. ಪ್ರತಿವಾದಿ ಮೈಸೂರಿನ ಕುವೆಂಪು ನಗರದಲ್ಲಿ ವಾಸವಿದ್ದಾರೆ ಅವರ ಮನೆಯ ನಂಬರ್ ಗೊತ್ತಿಲ್ಲ. ಪ್ರತಿವಾದಿ ಕರಾರು ಪತ್ರದಲ್ಲಿ ಯಾವ ವಿಳಾಸ ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಅವರು ಈಗ ಎಲ್ಲಿ ವಾಸವಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದಿ ಹೆಂಡತಿ ಮತ್ತು ಮಕ್ಕಳ ಹೆಸರು ಗೊತ್ತಿಲ್ಲ. ದಾವಾ ಆಸ್ತಿ ಪಿರಿಯಾಪಟ್ಟಣದಿಂದ ಎಷ್ಟು ದೂರದಲ್ಲಿದೆ ಹಾಗೂ ಅದರ ಮಾರುಕಟ್ಟೆ ಮೌಲ್ಯ ಗೊತ್ತಿಲ್ಲ. 500 ರೂ ಮುಖಬೆಲೆಯ ರೂ.20,000/– ಗಳನ್ನು ಬ್ಯಾಂಕ್ ನ ಒಳಗಡೆ ಕೊಟ್ಟಿದ್ದಾರೆ. ಹಣ ಕೊಡುವಾಗ ವಾದಿ, ಪ್ರತಿವಾದಿ ಹಾಗೂ ವಾದಿ ಪರ ವಕೀಲರು ಇದ್ದರು. ಬ್ಯಾಂಕ್ ಹೊರಗಡೆ ನಾನು ಸಹಿ ಮಾಡಿದ್ದೇನೆ.

ಕರಾರು ಪತ್ರ ತಯಾರಿಸಿದ ವಕೀಲರ ಕಚೇರಿಯಿಂದ ಬ್ಯಾಂಕ್ ಗೆ 4 ಕಿಮೀ ದೂರವಿದೆ. ನನ್ನನ್ನು ಪ್ರತಿವಾದಿಯೇ ಬ್ಯಾಂಕ್ ಗೆ ಕರೆದುಕೊಂಡು ಹೋಗಿದ್ದಾರೆ. ಪ್ರತಿವಾದಿ ನನ್ನ ಕಚೇರಿಗೆ ಬರುತ್ತಿದ್ದರು ಆದ್ದರಿಂದ ಅವರ ಪರಿಚಯವಿತ್ತು. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರ ಓದಿದ್ದೇನೆ. ನನ್ನ ಪ್ರಮಾಣ ಪತ್ರವನ್ನು ನೋಡಿ ಸಹಿ ಮಾಡಿದ್ದೇನೆ ಅದರಲ್ಲಿ ಮುಂಗಡವಾಗಿ ರೂ.3,000/– ಕೊಟ್ಟಿರುವುದಾಗಿ ಬರೆಯಲಾಗಿದೆ ಎಂದರೆ ಸರಿ. ಯಾರಾದರೂ ಪತ್ರ ಬರೆಸಿಕೊಳ್ಳಲು ಬಂದಾಗ ಅವರು ಏನು ಹೇಳುತ್ತಾರೋ ಅದನ್ನು ಬರೆದುಕೊಡುತ್ತಾರೆ ಎಂದರೆ ಸರಿ. ನಾನು ನೋಡಿಲ್ಲದೇ ಇರುವುದನ್ನು ಯಾವುದೇ ಪತ್ರ ಬರಹಗಾರರು ಬರೆದಿದ್ದರು ಸಹ ನಾನು ಸಹಿ ಮಾಡುವುದಿಲ್ಲ. ಚೆಕ್ ಮೂಲಕ ರೂ.2,80,000/– ಹಾಗೂ ರೂ.20,000/– ನಗದು ಕೊಟ್ಟಿರುವುದನ್ನು ನಾನು ನೋಡಿದ್ದೇನೆ.

ಕರಾರು ಪತ್ರದಲ್ಲಿ ರೂ.3,00,000/– ಮುಂಗಡ ಹಣ ಕೊಟ್ಟಿರುವುದಾಗಿ ಬರೆದಿರುವುದು ಸುಳ್ಳು ಎಂದರೆ ಸರಿ. ಕರಾರು ಪತ್ರದಲ್ಲಿ ಚೆಕ್ ಮೂಲಕ ರೂ.2,80,000/– ಹಾಗೂ ರೂ.20,000/–

ನಗದು ಕೊಟ್ಟಿರುವುದಾಗಿ ಏಕೆ ಬರೆದಿದ್ದೀರಿ ಎಂದು ನಾನು ಆವಾಗ ಕೇಳಿಲ್ಲ. ದಾವಾ ಆಸ್ತಿಯ ಯಾವ ದಿಕ್ಕಿನಲ್ಲಿ ಮುಖ್ಯ ರಸ್ತೆ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸಂಬಂಧ ಇದೇ ನ್ಯಾಯಾಲಯದಲ್ಲಿ ಮತ್ತೊಂದು ಪ್ರಕರಣ ನಡೆಯುತ್ತಿರುವುದು ಗೊತ್ತಿಲ್ಲ. ಕರಾರು ಪತ್ರ ಬರೆದಾಗ ಸುಮಾರು 3.00 ಗಂಟೆಯಾಗಿತ್ತು. ಕರಾರು ಪತ್ರ ಬರೆದ 1 ಗಂಟೆಯ ನಂತರ ರೂ.20,000/- ನಗದು ಕೊಟ್ಟಿದ್ದಾರೆ. ಕರಾರು ಪತ್ರಕ್ಕೆ ಪ್ರತಿವಾದಿ ಎಷ್ಟು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ.

ಕರಾರು ಪತ್ರ ಬರೆದ ವಕೀಲರ ಕಚೇರಿ ಯಾವ ಬಿಲ್ಡಿಂಗ್ ನಲ್ಲಿದೆ ಮತ್ತು ಎಷ್ಟನೇ ಮಹಡಿಯಲ್ಲಿದೆ ಎಂದು ಗೊತ್ತಿಲ್ಲ. ವಾದಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಎಷ್ಟು ಮೌಲ್ಯದ ಸ್ಟಾಂಪ್ ಪೇಪರ್ ತಂದಿದ್ದರು ಎಂದು ಗೊತ್ತಿಲ್ಲ. ಚೆಕ್ ಮೂಲಕ ರೂ.2,80,000/- ಪಡೆದುಕೊಂಡು ರೂ.20,000/- ನಗದು ಮೂಲಕ ಪಡೆದುಕೊಂಡು ಕರಾರು ಪತ್ರ ಬರೆದುಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ವಾಸಿಸಿರುವ ಯಾವುದಾದರೂ ವ್ಯಕ್ತಿಯ ಸಹಿಯನ್ನು ಕರಾರು ಪತ್ರಕ್ಕೆ ಮಾಡಿಸಿ ಎಂದು ನಾನು ಹೇಳಿಲ್ಲ. ದಾವಾ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂದು ನಾನು, ವಾದಿ, ಹಾಗೂ ಈ ಕೇಸಿನಲ್ಲಿ ಸಾಕ್ಷ್ಯ ಹೇಳಿರುವ ವೆಂಕಟೇಶರವರು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕರಾರು ಪತ್ರದ ಮೂಲಕ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಆದ ದಿನದಿಂದ ವಾದಿ ನನಗೆ ಪರಿಚಯವಿದ್ದಾರೆ. ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**